# ವಿಶ್ವ ಪರಿಸರ ದಿನ ಮತ್ತು ಅದರ ಮಹತ್ವ

ಪ್ರೊ. ಜೆ. ಆರ್. ಲಕ್ಷ್ಮಣರಾವ್

ಪ್ರಕೃತಿಯು ಭಗವಂತನ ಮಹಿಮೆ, ಸೌಂದರ್ಯಗಳ ಪ್ರತೀಕವಾಗಿದೆ; ಪರಮಾತ್ಮನ ಶಕ್ತಿಯೇ ಪ್ರಕೃತಿಯ ಮೂಲಕ ಅಭಿವ್ಯಕ್ತವಾಗಿದೆ. ಇಂಥ ಪರಿಸರವನ್ನು ಆರಾಧಿಸುವುದು ಭಾರತೀಯ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ. ಪ್ರತಿ ವರ್ಷ ಆಚರಿಸುವ ವಿಶ್ವ ಪರಿಸರದ ದಿನದ ಮಹತ್ವ ಹಾಗೂ ಪರಿಸರ ಸಂರಕ್ಷಣೆಯ ಆವಶ್ಯಕತೆಯನ್ನು ಪರಿಣಾಮಕಾರಿಯಾಗಿ ಬಿಂಬಿಸಿರುವ ಲೇಖಕರು ಕನ್ನಡದ ಹಿರಿಯ ವಿಜ್ಞಾನ ಲೇಖಕರಲ್ಲಿ ಒಬ್ಬರು; ವಿಜ್ಞಾನವನ್ನು ಜನಪ್ರಿಯಗೊಳಿಸಲು ಅವಿಶ್ರಾಂತವಾಗಿ ದುಡಿಯುತ್ತಾ ಬಂದವರು. ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಮಂಡಲಿ [NCSTC] ಇವರಿಗೆ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಿದೆ.


೧೯೭೨, ಜೂನ್ ೫ರಂದು ಅರ್ಥಾತ್ ಸುಮಾರು ಮೂವತ್ತೊಂಬತ್ತು ವರ್ಷಗಳ ಕೆಳಗೆ ವಿಶ್ವಸಂಸ್ಥೆಯ ಆಶ್ರಯದಲ್ಲಿ ಸ್ಟಾಕ್‌ಹೋಮ್‌ನಲ್ಲಿ ಒಂದು ಜಾಗತಿಕ ಸಮ್ಮೇಳನವನ್ನು ವ್ಯವಸ್ಥೆಗೊಳಿಸಿದ್ದರು. ಮಾನವಕುಲದ ಪರಿಸರ ತೀವ್ರಗತಿಯಲ್ಲಿ ಹದಗೆಡುತ್ತಿರುವುದರ ಪರಿಜ್ಞಾನ ಆ ಹಿಂದಿನ ನಾಲ್ಕಾರು ವರ್ಷಗಳಲ್ಲಿ ಪ್ರಪಂಚದ ಜನತೆಗೆ ಉಂಟಾದುದರ ಫಲವೇ ಆ ಸಮ್ಮೇಳನ. ಅದರ ನೆನಪಿಗಾಗಿ ಪ್ರತಿವರ್ಷವೂ ಆ ದಿನವನ್ನು 'ವಿಶ್ವ ಪರಿಸರ ದಿನ' ಎಂದು ಕರೆದು ಪರಿಸರ ಸಂರಕ್ಷಣೆಯ ಬಗೆಗೆ ನಮ್ಮ ಜವಾಬ್ದಾರಿಯನ್ನು ನೆನಪಿಗೆ ತಂದುಕೊಳ್ಳುತ್ತೇವೆ, ಗಿಡಗಳನ್ನು ನೆಡುತ್ತೇವೆ; ಪರಿಸರ ಮಾಲಿನ್ಯ ತಡೆಗಟ್ಟುವ ಬಗೆಗೆ, ಅರಣ್ಯಗಳು ಮತ್ತು ವನ್ಯಜೀವಿಗಳ ಸಂರಕ್ಷಣೆಯ ಬಗೆಗೆ ಉಪನ್ಯಾಸ, ವಿಚಾರಸಂಕಿರಣ, ಚಲನಚಿತ್ರ ಪ್ರದರ್ಶನ ಮುಂತಾದವುಗಳನ್ನು ಏರ್ಪಡಿಸುತ್ತೇವೆ.




"ಕಾಡು ಬೆಳೆಸುವುದು, ಪರಿಸರ ಮಾಲಿನ್ಯ ತಡೆಗಟ್ಟುವುದು ಅಗತ್ಯವೆಂಬುದೇನೋ ನಿಜ; ಆದರೆ ವನ್ಯಜೀವಿಗಳಿಗೆ ಏಕೆ ಅಷ್ಟು ಪ್ರಾಶಸ್ತ್ಯ? ಹುಲಿ, ಚಿರತೆಗಳ ಸಂಖ್ಯೆ ಕಡಮೆಯಾದರೆ ಒಂದು ದೃಷ್ಟಿಯಲ್ಲಿ ಒಳ್ಳೆಯದೇ ಅಲ್ಲವೇ? ಅದರಿಂದ ಪರಿಸರಕ್ಕೆ ಆಗುವ ಹಾನಿಯಾದರೂ ಏನು?" ಎಂದು ಒಮ್ಮೆ ಯಾರೋ ಕೇಳಿದರು. ಅವರು ಅನೇಕ ವಿಷಯಗಳನ್ನು ಚೆನ್ನಾಗಿ ಅರಿತ ವಿದ್ವಾಂಸರೇ. ಪ್ರಕೃತಿಯಲ್ಲಿ ಕಂಡುಬರುವ ಅತಿನಿಕಟವಾದ ಪರಸ್ಪರ ಸಂಬಂಧಗಳ ಬಗ್ಗೆಯೂ ಪರಿಸರದ ಸಮತೋಲನದ ಬಗ್ಗೆಯೂ ನಮ್ಮ ಜನರ ತಿಳಿವಳಿಕೆ ಎಷ್ಟು ಅಲ್ಪವೆಂಬುದು ಇದರಿಂದ ಗೊತ್ತಾಗುತ್ತದೆ.


ಕಾಡಿನಲ್ಲಿ ಹುಲಿ ಚಿರತೆಗಳ ಸಂಖ್ಯೆ ಕ್ಷೀಣಿಸುವುದಕ್ಕೂ ನಮ್ಮ ಊರಿನಲ್ಲಿ ನೀರಿಗೆ ಅಭಾವ ಉಂಟಾಗುವುದಕ್ಕೂ ಸಂಬಂಧ ಇರುವುದನ್ನು ಅನೇಕರು ಅರಿಯರು. ಅವೆರಡಕ್ಕೆ ಇರುವ ಕಾರ್ಯ-ಕಾರಣ ಸಂಬಂಧ ಸುಲಭವಾಗಿ ಅರ್ಥವಾಗುವಂಥದು. ಜಿಂಕೆಯಂಥ ಸಸ್ಯಾಹಾರಿಗಳು ಹುಲಿ ಚಿರತೆಗಳ ಆಹಾರ. ಹುಲಿ ಚಿರತೆಗಳ ಸಂಖ್ಯೆ ಕ್ಷೀಣಿಸಿದಾಗ ಸಸ್ಯಾಹಾರಿ ವನ್ಯಮೃಗಗಳ ಸಂಖ್ಯೆ ಏರುತ್ತದೆ. ಅದರ ಪರಿಣಾಮವಾಗಿ ಹುಲ್ಲು ಬೆಳೆದಿದ್ದ ನೆಲವೂ ಗಿಡಮರಗಳೂ ಹೆಚ್ಚು ಹೆಚ್ಚು ಬೋಳಾಗುತ್ತವೆ. ಸಹಜವಾಗಿಯೇ ಅಲ್ಲಿಯ ಮಣ್ಣನ್ನು ಮಳೆಯ ನೀರು ಸುಲಭವಾಗಿ ಕೊಚ್ಚಿ ಹಾಕುತ್ತದೆ. ಕಾಡಿನಲ್ಲಿ ಹರಿಯುವ ಝರಿಗಳು ಕೊಂಡೊಯ್ಯುವ ಆ ಮಣ್ಣು, ಅಂತಿಮವಾಗಿ ಕೆರೆಗಳಂಥ ಜಲಾಶಯಗಳನ್ನು ತಲಪುತ್ತವೆ. ಹೂಳು ತುಂಬುತ್ತಾ ಹೋದಂತೆ ಜಲಾಶಯಗಳು ಶೇಖರಿಸಬಲ್ಲ ನೀರಿನ ಪ್ರಮಾಣವೂ ಕಡಮೆಯಾಗುತ್ತದೆ. ನೀರು ಸರಬರಾಜಿಗೆ ಆ ಜಲಾಶಯಗಳನ್ನು ನಂಬಿಕೊಂಡಿರುವ ನಮ್ಮೂರಿನಲ್ಲಿ ನೀರಿಗೆ ಕೊರತೆಯಾಗುತ್ತದೆ.

ಪ್ರಕೃತಿಯಲ್ಲಿ ಜೀವಿ-ಜೀವಿಗಳ ನಡುವೆ, ಜೀವಿ-ನಿರ್ಜೀವಿಗಳ ನಡುವೆ ಇರುವ ಈ ಕೊಂಡಿಗಳ ವ್ಯಾಪ್ತಿ ಎಷ್ಟೆಂಬುದು ಇದರಿಂದ ಗೊತ್ತಾಗುತ್ತದೆ. ಇಂಥ ವ್ಯವಸ್ಥೆ ಇರುವ ಪ್ರಕೃತಿಯ ಮಡಿಲಿನಲ್ಲಿ ಕೋಟ್ಯಂತರ ವರ್ಷಗಳ ಕಾಲ ನಡೆದಿರುವ ವಿಕಸನದ ಫಲವಾಗಿ




ವೈವಿಧ್ಯಮಯವಾದ ಜೈವಿಕ ಜಗತ್ತು ಅಸ್ತಿತ್ವಕ್ಕೆ ಬಂದಿದೆ. ಅದರ ಒಂದು ಬದಿಯಲ್ಲಿ ಏನಾದರೂ ಹೆಚ್ಚು ಕಡಮೆಯಾದರೆ, ಇನ್ನೊಂದು ಬದಿಯಲ್ಲಿ ಅದನ್ನು ಸರಿಪಡಿಸುವ ವ್ಯವಸ್ಥೆ ಪ್ರಕೃತಿಯಲ್ಲಿದೆ.

ಅಚ್ಚುಕಟ್ಟಾದ ಈ ಸಮತೋಲನವನ್ನು ಏರುಪೇರು ಮಾಡಿದ ಅಪಕೀರ್ತಿ ಮನುಷ್ಯಜೀವಿಗೆ ಸಲ್ಲುತ್ತದೆ. ಜೀವಿಗಳ ವಿಕಸನದ ಒಂದು ಹಂತದಲ್ಲಿ, ಆ ವಿಕಸನದ ಪರಿಣಾಮವಾಗಿಯೇ ಉದ್ಭವಿಸಿದ ಮನುಷ್ಯ ಹಿಂಗಾಲುಗಳ ಮೇಲೆ ನಿಂತು ಕೈಗಳಿಂದ ಕೆಲಸ ಮಾಡುವುದನ್ನು ಕಲಿತುಕೊಂಡು, ಅದಕ್ಕೆ ತಕ್ಕ ಸಾಧನಗಳನ್ನು ನಿರ್ಮಿಸಿಕೊಂಡ; ಅದರ ಫಲವಾಗಿ ಹೆಚ್ಚು ಬುದ್ಧಿವಂತನಾದ. ಇತರ ಜೀವಿಗಳಿಂದ ಬಹುಮಟ್ಟಿಗೆ ಹೀಗೆ ಭಿನ್ನನಾದುದರಿಂದ, ತಾನೂ ನಿಸರ್ಗದ ಶಿಶುವೆಂಬುದನ್ನು ಮರೆತ. ನಿಸರ್ಗಕ್ಕೆ ಹೊಂದಿಕೊಂಡು ಬಾಳನ್ನು ಹಸನು ಮಾಡಿಕೊಳ್ಳುವುದನ್ನು ಬಿಟ್ಟು ನಿಸರ್ಗವನ್ನು ಇಷ್ಟ ಬಂದಂತೆ ದುಡಿಸಿಕೊಳ್ಳಬಹುದೆಂಬ ಭ್ರಮೆಗೆ ಒಳಗಾದ.



ಕೋಟ್ಯಂತರ ವರ್ಷಗಳ ನೈಸರ್ಗಿಕ ಪ್ರಕ್ರಿಯೆಗಳ ಫಲವಾಗಿ ಭೂಮಿಯ ಒಡಲಲ್ಲಿ ರೂಪುಗೊಂಡಿದ್ದ ಕಲ್ಲಿದ್ದಲು, ಕಲ್ಲೆಣ್ಣೆಗಳನ್ನು ಬಗಿದು, ತೆಗೆದು, ಸುಟ್ಟು ಹಾಕಿದ. ನೂರಾರು ಬಗೆಯ ಖನಿಜಗಳನ್ನು ಹೊರತೆಗೆದು ಸೂರೆ ಮಾಡಿದ. ಬಗೆಬಗೆಯ ಜೀವಿಗಳ ನಡುವೆ ಏರ್ಪಟ್ಟಿದ್ದ ಸಮತೋಲನವನ್ನು ನಾಶಮಾಡಿ ತನ್ನ ಸಂಖ್ಯೆಯನ್ನು ಅಗಾಧವಾಗಿ ಬೆಳೆಸಿಕೊಂಡ. ಅರಣ್ಯಗಳನ್ನು ಸವರಿಹಾಕಿ, ಆ ಭೂಮಿಯನ್ನು ಬೇಸಾಯಕ್ಕೆ ಬಳಸಿಕೊಂಡ. ಕೃತಕ ರಸಗೊಬ್ಬರಗಳನ್ನೂ ಕೀಟನಾಶಕಗಳನ್ನೂ ಹರಡಿ, ಹಂಚಿ, ಕುಡಿಯುವ ನೀರನ್ನೂ ಉಸಿರಾಡುವ ಗಾಳಿಯನ್ನೂ ವಿಷಮಯವಾಗಿ ಮಾಡಿದ. ವಾಯುಮಂಡಲದಲ್ಲಿ ಕಾರ್ಬನ್ ಡೈಆಕ್ಸೈಡ್ ಪ್ರಮಾಣ ಹೆಚ್ಚಾಗುವಂತೆ ಮಾಡಿ ಜೀವಪ್ರಪಂಚದ ಉಳಿವಿಗೇ ಈಗ ಸಂಚಕಾರ ತರುವುದರಲ್ಲಿದ್ದಾನೆ.

ತನ್ನ ವಿಧ್ವಂಸಕ ಕೃತ್ಯದ ಅರಿವು ಅವನಿಗೆ ಉಂಟಾಗುತ್ತಿರುವುದು ತೀರಾ ಈಚೆಗೆ, ಕೆಲವು ದಶಕಗಳ ಅವಧಿಯಲ್ಲಿ. ಈಗಲೂ ಕಾಲ ಮಿಂಚಿಲ್ಲ. ಪರಿಸ್ಥಿತಿಯನ್ನು ಹತೋಟಿಗೆ ತೆಗೆದುಕೊಂಡು ನಮ್ಮ ಮೊಮ್ಮಕ್ಕಳು ಮರಿಮಕ್ಕಳಿಗೆ ಸಹ್ಯವೆನಿಸುವ ಪರಿಸರವನ್ನು ಅವರಿಗೆ ಬಿಟ್ಟುಹೋಗುವುದು ನಮಗೆ ಸಾಧ್ಯವಾದೀತು. ಅದಕ್ಕೆ ನಾವು ಒಬ್ಬೊಬ್ಬರೂ ಮಾಡಬೇಕಾದುದು ಬಹಳಷ್ಟಿದೆ. ಅದೆಂದರೆ, ಸಂಪನ್ಮೂಲಗಳ ಮಿತವ್ಯಯ ಹಾಗೂ ಪುನರ್ಬಳಕೆ, ಅರಣ್ಯ ಹಾಗೂ ಅರಣ್ಯಜೀವಿಗಳ ರಕ್ಷಣೆ – ಹೀಗೆ ದೊಡ್ಡ ಪಟ್ಟಿಯನ್ನೇ ಮಾಡಬಹುದು. ಅವೆಲ್ಲಕ್ಕೂ ಪೂರ್ವಭಾವಿಯಾಗಿ ಮೊದಲು ನಾವೆಲ್ಲರೂ ಪರಿಸರ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕಾಗಿದೆ. ವಿಶ್ವ ಪರಿಸರ ದಿನ ಈ ನಿಟ್ಟಿನಲ್ಲಿ ಎಲ್ಲರಿಗೂ ಎಚ್ಚರಿಕೆಯ ಗಂಟೆ ಮೊಳಗಿಸಲಿ; ಪರಿಸರ ಪ್ರಜ್ಞೆ ಎಲ್ಲರಲ್ಲೂ ಒಡಮೂಡಲಿ; ಪರಿಸರ ಇಂದಿನ ಮತ್ತು ನಾಳಿನ ಜನಾಂಗಕ್ಕೆ ಸಹ್ಯವಾಗಿ ಉಳಿಯಲಿ ಎಂದು ಆಶಿಸೋಣ. ಈ ನಿಟ್ಟಿನಲ್ಲಿ ನಮ್ಮೆಲ್ಲರ ಬದ್ಧತೆ ಬಲವಾಗಲಿ. ಏಕೆಂದರೆ ಇದು ಭೂಮಿಯ ಮೇಲೆ ಜೀವಿಗಳ ಅಳಿವು–ಉಳಿವಿನ ಪ್ರಶ್ನೆ.

•



ನಮ್ಮ ಬದುಕು ಮತ್ತು ಭವಿಷ್ಯ ಅರಳುವುದು ಸ್ವಚ್ಛ ಪರಿಸರದಲ್ಲಿ